


## ಚಿಂತನಾರ್ಹ ಲೇಖನ

'ಮಕ್ಕಳನ್ನು ಹಾಸ್ಟೆಲ್‌ಗೆ ಸೇರಿಸಿದ್ದೀರಾ?' ರಘುನಾಥ ಚ.ಹ. ಅವರ ಮುಖಪುಟ ಲೇಖನ (ಸುಧಾ, ಆ. 24) ಒಂದು ಚಿಂತನಾರ್ಹ ಲೇಖನ. ಕೆಲವರು ಪ್ರತಿಷ್ಠೆಗಾಗಿ ತಮ್ಮ ಮಕ್ಕಳನ್ನು ಎಷ್ಟೋ ಡೊನೇಷನ್ ಕೊಟ್ಟು ಹಾಸ್ಟೆಲ್‌ಗೆ ಸೇರಿಸುವವರಿದ್ದಾರೆ. ಹಾಸ್ಟೆಲ್‌ನ ಊಟ, ತಿಂಡಿ, ವಾಸ್ತವ್ಯ.. ನೋಡಿದರೆ ವಿದ್ಯಾರ್ಥಿಗಳು ವಿಧಿಯಿಲ್ಲದೆ ಹಾಸ್ಟೆಲ್‌ನಲ್ಲಿ ಇರಬೇಕಾದ ಅನಿವಾರ್ಯತೆ ಇದೆ. ಪೋಷಕರ ಆತಂಕವೂ ಇದ್ದೇ ಇರುತ್ತದೆ.

—ರಮ್ಯಾ ಬೆಳ್ಳಾವೆ ಉಡುಪಿ, ಸಿ.ಪಿ.ಕೆ. ಮೈಸೂರು, ಕೊಹಿಮ ಬಸರಕೋಡು, ಜೆ. ಪ್ರದೀಪ ಕುಮಾರ ಹೂವಿನಹಡಗಲಿ, ಧರ್ಮೇಂದ್ರ ದೊಡ್ಡಮಗ್ಗೆ

## ಹಾಸ್ಟೆಲ್‌ಗಳು ಅವಶ್ಯಕ

ನಾನು ನನ್ನ ಮಕ್ಕಳು ಸೇರಿ ಹಲವಾರು ವರ್ಷ ಹಾಸ್ಟೆಲ್‌ನಲ್ಲಿ ಕಳೆದಿದ್ದೇವೆ. ಉಚಿತ ಹಾಸ್ಟೆಲ್ ಸಿಗದಿದ್ದರೆ ನಾನು ವೈದ್ಯನಾಗುತ್ತಿರಲಿಲ್ಲ. ಕೊರತೆಗಳಿದ್ದರೂ ಇಂದಿನ ದಿನಗಳಲ್ಲಿ ಹಾಸ್ಟೆಲ್‌ಗಳು ಅವಶ್ಯಕ.

—ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಪಿ. ಗೋವಿಂದರಾಜ್ ಶಿವಮೊಗ್ಗ

## ಸ್ವಾಗತಾರ್ಹ ಸಲಹೆ

ಹಾಸ್ಟೆಲ್‌ಗಳ ಸಾಧಕ–ಬಾಧಕಗಳ ಬಗೆಗಿನ ಲೇಖನ ಸಕಾಲಿಕ. ಲೇಖಕರು ಪೋಷಕರಿಗೆ ನೀಡಿರುವ ಸಲಹೆ–ಸೂಚನೆಗಳು ಸ್ವಾಗತಾರ್ಹ. ವಿದ್ಯಾರ್ಥಿಗಳ ಮನೋ ವಿಕಾಸಕ್ಕೆ ರಂಗಸ್ಥಳವಾಗಿರುವ ವಿದ್ಯಾರ್ಥಿನಿಲಯಗಳು ಅಹಿತಕರ ಘಟನೆಗಳಿಂದ ಅಲ್ಲೋಲಕಲ್ಲೋಲವಾಗಿವೆ. ಇವುಗಳ ಬಗ್ಗೆ ಪೋಷಕರು ಎಚ್ಚರ ವಹಿಸಲು ಲೇಖಕರು ಸೂಚಿಸಿದ್ದು ಉತ್ತಮ ಅಭಿಪ್ರಾಯ.

—ಸು.ವಿಜಯಲಕ್ಷ್ಮಿ ಶಿವಮೊಗ್ಗ, ಗಾಣಧಾಳು ರಾಮಣ್ಣ ಚಿತ್ರದುರ್ಗ

## ಕಣ್ಣು ತೆರೆಸುವಂತಿದೆ

'ನಿಮ್ಮೊಡನೆ'ಯಲ್ಲಿ 'ಅನಗತ್ಯ ಉಡುಗೆ ಚರ್ಚೆ' (ಎನ್. ಉದಯಕುಮಾರ್) ಬರಹ ವಿದ್ಯಾಭ್ಯಾಸದ ಹಕ್ಕನ್ನು ವಿದ್ಯಾರ್ಥಿಗಳಿಂದ ಕಸಿದುಕೊಂಡ ಇಲಾಖೆಯ ಕಣ್ಣು ತೆರೆಸುವಂತಿದೆ. ವಸ್ತ್ರಸಂಹಿತೆಯಿಂದ ಕಲಿಕೆಯ ಗುಣಮಟ್ಟವಾಗಲಿ ಕೌಶಲ್ಯವಾಗಲಿ ವೃದ್ಧಿಸಲು ಸಾಧ್ಯವಿಲ್ಲ.

—ಬಂಟ್ವಾಳ ಸೂರ್ಯನಾರಾಯಣರಾವ್ ಮಂಡ್ಯ, ಮಹಾವೀರ ಕಾಸರ ಶಿವಮೊಗ್ಗ, ಕೆ.ಪಿ. ರಾಮಗುಂಡಿ ಬೈಲಹೊಂಗಲ, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ

## ಮಾಹಿತಿಪೂರ್ಣ

ರಕ್ತದೊತ್ತಡ ಕಡಿಮೆಯಾಗುವುದು ಹೇಗೆ? (ಡಾ.ವಿನಯ ಶ್ರೀನಿವಾಸ್) ಆರೋಗ್ಯ ಲೇಖನ ಮಾಹಿತಿಪೂರ್ಣವಾಗಿದೆ. ಎಪ್ಪತ್ತು ವರ್ಷ ಆರೋಗ್ಯವಂತನಾಗಿದ್ದವರಿಗೆ ಇದ್ದಕ್ಕಿದ್ದಂತೆ ರಕ್ತದ ಒತ್ತಡ ದಿಢೀರ್ ಕಡಿಮೆ ಆಗುವುದು ಆತಂಕಕ್ಕೆ ದೂಡಿದೆ. ರಕ್ತದ ಒತ್ತಡ ಕಡಿಮೆ ಆಗಲು ಕಾರಣ, ಈ ರೀತಿ ಆದಾಗ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಲೇಖಕಿ ವಿವರವಾಗಿ ತಿಳಿಸಿದ್ದಾರೆ.

—ಬಿ.ಎಸ್. ರಮೇಶ್, ಸುಂದರ್ ಬೆಂಗಳೂರು, ಬಾಳ್ಳುಪೇಟೆ ನೀಲಕಂಠಪ್ಪ

## ಉಪಯುಕ್ತ ಮಾಹಿತಿ

'ಟೀನೇಜ್ ತಲೆನೋವು' (ಲಾವಣ್ಯಗೌರಿ ವೆಂಕಟೇಶ್) ಲೇಖನ ಉಪಯುಕ್ತ ಮಾಹಿತಿಗಳಿಂದ ಕೂಡಿದೆ.

—ಎಚ್.ಆನಂದಕುಮಾರ್ ಚಿತ್ರದುರ್ಗ

## ಹೆಮ್ಮೆಯ ರವಿಕಿರಣ್

'ಸಂಗೀತ ಕಲಾನಿಧಿ' (ಉಮಾ ಅನಂತ್) ವಿದ್ವಾನ್ ರವಿಕಿರಣ್ ಅವರು ತಮ್ಮ ಎರಡನೇ ವಯಸ್ಸಿನಿಂದಲೇ ಸಂಗೀತದೊಂದಿಗೆ ಬಾಂಧವ್ಯ ಬೆಳೆಸಿಕೊಂಡು ಪ್ರತಿಷ್ಠಿತ ಸಂಗೀತ ಕಲಾನಿಧಿ ಪ್ರಶಸ್ತಿ ಪಡೆಯುತ್ತಿರುವುದು ತಿಳಿದು ನಿಜಕ್ಕೂ ಸಂತೋಷವಾಯಿತು. ರವಿಕಿರಣ್ ಕನ್ನಡಿಗರ ಹೆಮ್ಮೆ ಎಂದರೆ ತಪ್ಪಿಲ್ಲ.

—ರತ್ನಾಕರ ಹೆಗಡೆಕಟ್ಟೆ ಮೂಡಬಿದಿರೆ, ರುಕ್ಮಿಣಿ ಕೃ. ದೇಶಪಾಂಡೆ ಗೋಕಾಕ

## ಗಾಂಭೀರ್ಯ ಬರುತ್ತದೆ

'ಊಟದ ಟೇಬಲ್‌ನಲ್ಲಿ..' (ಹೀರಾ ಆರ್.) ಲೇಖನದಲ್ಲಿ ನೀಡಿದ ಎಲ್ಲ ಸಲಹೆಗಳೂ ಅನುಕರಣೀಯ.ಈ ಎಲ್ಲ ಸಲಹೆಗಳನ್ನು ಯಥಾವತ್ ಪಾಲಿಸಿದರೆ ಊಟಕ್ಕೆ ಖಂಡಿತಾ ಗಾಂಭೀರ್ಯ ಬರುತ್ತದೆ.

—ನಾರಾಯಣ ಯಾಜಿ ಶಿರಾಲಿ

## ಸುಮಧುರ ಸನ್ನಿವೇಶಗಳು

ಪ್ರವಾಸ ಅಂಕಣದಲ್ಲಿ 'ಮತ್ತೆ ಮೇಲೆದ್ದ ಹಿರೇಭಾಸ್ಕರ' (ಎ.ಜಿ. ಲಕ್ಷ್ಮೀನಾರಾಯಣ) ಲೇಖನ ನನ್ನ ಬಾಲ್ಯ ಜೀವನದ ಅತ್ಯಂತ ಮನೋಹರ ಮತ್ತು ಉಲ್ಲಾಸದ ಸನ್ನಿವೇಶವನ್ನು ನೆನಪಿಗೆ ತಂದುಕೊಟ್ಟಿತು. ಸುಮಾರು 65 ವರ್ಷಗಳ ಹಿಂದೆ (1952ನೇ ಇಸವಿ) ಜಲಾಶಯದ ಸುತ್ತಲೂ ದಟ್ಟ ಅರಣ್ಯ ಆವರಿಸಿಕೊಂಡಿತ್ತು. ಇಲ್ಲಿ ವನ ಭೋಜನವನ್ನು ಮಾಡಿದ್ದೆವು. ಹತ್ತಿರದ ನಾಗವಲ್ಲಿ ಅರಣ್ಯ ವೀಕ್ಷಣಾ ಬಂಗಲೆಯಲ್ಲಿ ತಂಗಿದ್ದಾಗ ಕತ್ತಲಿನಲ್ಲಿ ಮರದ ಕೊಂಬೆಗಳ ಮೇಲೆ ನೂರಾರು ಮಿಣುಕು ಹುಳಗಳು ಒಂದೇ ಬಾರಿಗೆ ಮಿನುಗುವ ಮತ್ತು ಆರುವ ವಿಸ್ಮಯದ ದೃಶ್ಯ ಈಗಲೂ ನನ್ನ ಮನದಲ್ಲಿ ಅಚ್ಚೊತ್ತಿದೆ.

—ಪ್ರೊ. ಎಸ್.ಆರ್.ದೇವಪ್ರಕಾಶ್ ತುಮಕೂರು

## ಮಾರ್ಮಿಕ ಕಥೆ

'ಪ್ರೀತಿಯ ಸುನಾಮಿ' ಕಥೆ (ಡೊನಾಲ್ಡ್ ಪಿರೇರ ಬೆಳ್ತಂಗಡಿ) ಮಾರ್ಮಿಕ.

—ಲಲಿತಾ ಅಂಬಾಗಿಲು ಉಪ್ಪುಂದ

## ಚೆನ್ನಾಗಿದೆ

'ಕೆಂಪು ಕಲ್ಲಿನ ಮಿನಾರ' (ಜಿ.ಆರ್. ಪಂಡಿತ ಸಾಗರ) ಲೇಖನ ಚೆನ್ನಾಗಿದೆ.

—ರವೀಂದ್ರನಾಥ ಶಿ.ಯಡಹಳ್ಳಿ, ರಾಜಶೇಖರ ಹಾದಿಮನಿ ಧಾರವಾಡ

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ

ಶ್ರೀ ಸಾಯಿಬಾಬ ಉಪಾಸಕರು
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ
ಕೇವಲ 5 ದಿನದಲ್ಲಿ
100% ಪರಿಹಾರ ಶತಸಿದ್ಧ
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ. ಬೆಂಗಳೂರು. 9620444460